## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 677 (838) |
| ಸದಸ್ಯರ ಹೆಸರು | : | ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 10.03.2026 |
| ಉತ್ತರಿಸಬೇಕಾದ ಸಚಿವರು | : | ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ನಗರಾಭಿವೃದ್ಧಿ ಇಲಾಖೆಯ ಹಾಲಿ ಕಾರ್ಯನಿರ್ವಹಿಸುತ್ತಿದ್ದು ನಿರ್ಮಾಣ್ ULMS-2 (United Land Management System) ತಂತ್ರಾಂಶದ ಬದಲಿಗೆ ಹೊಸ ತಂತ್ರಾಶ ಜಾರಿ ನಂತರ, ಕಟ್ಟಡ ಪರವಾನಿಗೆ ಸ್ಥಗಿತವಾಗಿದೆಯೇ; ಕಳೆದ ಎಷ್ಟು ಅವಧಿಯಿಂದ ಸ್ಥಗಿತವಾಗಿದೆ; ಮಂಗಳೂರು ನಗರ ವ್ಯಾಪ್ತಿಯಲ್ಲಿ ಎಷ್ಟು ಕಟ್ಟಡ ಪರವಾನಿಗೆಗಳ ವಿತರಣೆಗೆ ಬಾಕಿಯಿವೆ. | ನಗರಾಭಿವೃದ್ಧಿ ಇಲಾಖೆಯ ಹಾಲಿ ಕಾರ್ಯನಿರ್ವಹಿಸುತ್ತಿರುವ ನಿರ್ಮಾಣ್ ULMS-2 (United Land Management System) ತಂತ್ರಾಂಶದಲ್ಲಿ ಇತ್ತೀಚಿಗೆ ಸೈಬರ್ ಭದ್ರತೆಗೆ ಸಂಬಂಧಿಸಿದಂತೆ ತೊಂದರೆ ಉಂಟಾಗಿದ್ದು, ತಂತ್ರಾಂಶವನ್ನು ಸಾರ್ವಜನಿಕ ಉಪಯೋಗಕ್ಕೆ Karnata State Data Center (KSDC) ರವರಿಂದ ನಿರ್ಬಂಧಿಸಲಾಗಿತ್ತು.<br><br>ಸದರಿ ತಂತ್ರಾಂಶವನ್ನು ಮರು ಸ್ಥಾಪಿಸುವ ಕುರಿತು KSDC ರವರು ಸೂಚಿಸಿರುವಂತೆ Internal and External Audit ಪ್ರಕ್ರಿಯೆಗಳನ್ನು ಪೂರ್ಣಗೊಳಿಸಿ ನಿರ್ಮಾಣ್-2 ತಂತ್ರಾಂಶವನ್ನು ಸಾರ್ವಜನಿಕ ಉಪಯೋಗಕ್ಕೆ ನೀಡಿರುವುದರಿಂದ, ಕಟ್ಟಡ ಪರವಾನಿಗೆ ಸ್ಥಗಿತವಾಗಿರುವುದಿಲ್ಲ, ಹಾಗೂ ಸರ್ಕಾರಕ್ಕೆ ಯಾವುದೇ ಆರ್ಥಿಕ ನಷ್ಟವಾಗಿರುವುದಿಲ್ಲ.<br><br>ಪ್ರಸ್ತುತ ಮಂಗಳೂರು ಮಹಾನಗರ ಪಾಲಿಕೆಯಲ್ಲಿ ಯಾವುದೇ ಕಟ್ಟಡ ಪರವಾನಿಗೆ ನೀಡುವುದು ಬಾಕಿ ಇರುವುದಿಲ್ಲ. |
| ಆ) | ಕಟ್ಟಡ ಪರವಾನಿಗೆ ಸ್ಥಗಿತದಿಂದಾಗಿ ಮನೆ ನಿರ್ಮಾಣಕ್ಕೆ ಸಿದ್ಧತೆ ಮಾಡಿಕೊಂಡ ನಾಗರೀಕರು, ಕಾರ್ಮಿಕರು ಹಾಗೂ ಕಟ್ಟಡ ನಿರ್ಮಾಣ ಸಂಬಂಧಿತ ಉದ್ಯಮ ವಲಯ (ಕಟ್ಟಡ ಸಾಮಗ್ರಿ) ಗಂಭೀರ ಆರ್ಥಿಕ ಸಂಕಷ್ಟಕ್ಕೆ ಒಳಗಾಗಿರುವುದನ್ನು ನಿವಾರಿಸಲು ಸರ್ಕಾರ ಯಾವ ರೀತಿಯ ಕ್ರಮಗಳನ್ನು ತೆಗೆದುಕೊಂಡಿದೆ. | |
| ಇ) | ಕಟ್ಟಡ ನಿರ್ಮಾಣ ಪರವಾನಿಗೆಯಿಂದ ಸರ್ಕಾರಕ್ಕೆ ಕಾರ್ಮಿಕ ಸೆಸ್ ಸೇರಿದಂತೆ ವಿವಿಧ ಸೆಸ್ ಹಾಗೂ ಜಿ.ಎಸ್.ಟಿ ಮುಖಾಂತರ ನೂರಾರು ಕೋಟಿ ರೂಪಾಯ ಆದಾಯ ಬರುತ್ತಿದ್ದು, ಪರವಾನಗಿ ನೀಡುವ ಪ್ರಕ್ರಿಯೆ ಸ್ಥಗಿತದಿಂದಾಗಿ ಸರ್ಕಾರಕ್ಕೆ ಎಷ್ಟು ಆದಾಯ ನಷ್ಟವಾಗುತ್ತಿದೆ. | |
| ಈ) | ರಾಜ್ಯದ ಮಹಾನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ ಇ-ಆಸ್ತಿ ತಂತ್ರಾಂಶವು ತುಂಬಾ ನಿಧಾನಗತಿಯಲ್ಲಿದ್ದು ಎಷ್ಟು ಅರ್ಜಿಗಳು ವಿಲೇವಾರಿಗೆ ಬಾಕಿಯಿವೆ; ಇ-ಆಸ್ತಿ ತಂತ್ರಾಂಶವನ್ನು ಸುಧಾರಿಸಲು ಇಲಾಖೆ ಯಾವ ರೀತಿಯ ಕ್ರಮವಹಿಸುತ್ತಿದೆ; | ಇ-ಆಸ್ತಿ ತಂತ್ರಾಂಶವನ್ನು ಇ-ಖಾತಾ ವಿತರಿಸಲು ಎನ್.ಐ.ಸಿ ಯಿಂದ ಅಭಿವೃದ್ಧಿಪಡಿಸಿ ಅನುಷ್ಠಾನಗೊಳಿಸಲಾಗಿದ್ದು, ಸದರಿ ತಂತ್ರಾಂಶವನ್ನು Karnataka State Data Centre (KSDC) ನಲ್ಲಿ host ಮಾಡಲಾಗಿರುತ್ತದೆ.<br><br>ಸದರಿ ಡೇಟಾ ಸೆಂಟರ್ ನ್ನು ನವೆಂಬರ್-2025 ರಲ್ಲಿ ಉನ್ನತೀಕರಣಗೊಳಿಸಿ, ಹಳೆ ಸರ್ವರ್ ನಿಂದ ಉನ್ನತೀಕರಣಗೊಂಡ ಸರ್ವರ್ ಗೆ ವರ್ಗಾಯಿಸುವ ಪ್ರಕ್ರಿಯೆ ಸಮಯದಲ್ಲಿ ಹಾಗೂ ಡಿಸೆಂಬರ್-2025 ತಿಂಗಳಲ್ಲಿ ಬಿ.ಬಿ.ಎಂ.ಪಿ ಮಾದರಿಯಲ್ಲಿ Draft e-Khata ಅನುಷ್ಠಾನ ಸಂದರ್ಭದಲ್ಲಿ ತೊಡಕು/ವೈಶಿಷ್ಟ್ಯತೆಯನ್ನು ಸಮಯದಲ್ಲಿ ತಂತ್ರಾಂಶದ ನಿವಾರಿಸುವ ಸಮಯದಲ್ಲಿ ತಾಂತ್ರಿಕ ಸಮಸ್ಯೆಯಿಂದ ಕಾರ್ಯನಿರ್ವಹಣೆಯಲ್ಲಿ ತೊಡಕುಂಟಾಗಿರುತ್ತದೆ. |

| | | |
|---|---|---|
| | | ತದನಂತರ ಸದರಿ ತಾಂತ್ರಿಕ ಸಮಸ್ಯೆಯನ್ನು ಪರಿಹರಿಸಲಾಗಿರುತ್ತದೆ. ಡಿಸೆಂಬರ್-2025ರ ನಂತರ ಸರ್ವರ್ ಸಮಸ್ಯೆಯಿರುವುದಿಲ್ಲ. ರಾಜ್ಯದ ಮಹಾನಗರ ಪಾಲಿಕೆಗಳಲ್ಲಿ ವಿಲೇವಾರಿಗೆ ಬಾಕಿ ಇರುವ ಅರ್ಜಿಗಳ ಒಟ್ಟು ಸಂಖ್ಯೆ:19565.<br><br>E-Khatha ಸಮಸ್ಯೆಗಳನ್ನು ನಿರ್ವಹಿಸಲು ಪ್ರತ್ಯೇಕವಾಗಿ ಸಹಾಯವಾಣಿಯನ್ನು ಸ್ಥಾಪಿಸಲಾಗಿರುತ್ತದೆ. ತಂತ್ರಾಂಶದ ಬಳಕೆಗೆ ಸಂಬಂಧಿಸಿದಂತೆ ಮತ್ತೊಮ್ಮೆ Live Demo ಮತ್ತು Hands on ತರಬೇತಿಯನ್ನು ಎನ್.ಐ.ಸಿ.ಯಿಂದ ನೀಡಲು ಸೂಚಿಸಲಾಗಿರುತ್ತದೆ. |
| ಊ) | ಈ ತಂತ್ರಾಂಶ ದೋಷಗಳನ್ನು ಸರಿಪಡಿಸಲು ಬೇಕಾಗುವ ಕಾಲಾವಧಿ ಎಷ್ಟು; ಇಂತಹ ತಾಂತ್ರಿಕ ಸಮಸ್ಯೆಗಳು ಉಂಟಾಗದಂತೆ ತಂತ್ರಾಂಶ ನಿರ್ವಹಣೆ ಮತ್ತು ಸುಧಾರಣೆ ಪ್ರಕ್ರಿಯೆಯಲ್ಲಿ ಯಾವ ರೀತಿಯ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳಲಾಗುತ್ತದೆ? | ಈಗಾಗಲೇ ಸರ್ಕಾರದ ಹಂತದಲ್ಲಿ ಹಾಗೂ ಪೌರಾಡಳಿತ ನಿರ್ದೇಶನಾಲಯದ ಹಂತದಲ್ಲಿ ಎನ್.ಐ.ಸಿ. ಯೊಂದಿಗೆ ಹಲವು ಸಭೆಗಳನ್ನು ನಡೆಸಿ ಸೂಕ್ತ ನಿರ್ದೇಶನ ನೀಡಲಾಗಿರುತ್ತದೆ.<br><br>ತಂತ್ರಾಂಶಕ್ಕೆ ಸಂಬಂಧಿಸಿದಂತೆ ನಗರ ಸ್ಥಳೀಯ ಸಂಸ್ಥೆಗಳಿಂದ ಎದುರಾಗುವ ತಾಂತ್ರಿಕ ಸಮಸ್ಯೆ/Bugs/Issues ಗಳನ್ನು ಆದ್ಯತೆ ಮೇರೆಗೆ ಹಂತ ಹಂತವಾಗಿ ಎನ್.ಐ.ಸಿ ಯಿಂದ ಪರಿಹರಿಸಲಾಗುತ್ತಿದ್ದು, ತಂತ್ರಾಂಶವು ತಾಂತ್ರಿಕವಾಗಿ ಸ್ಥಿರತೆ (Stable)ಯಿಂದ ಕಾರ್ಯನಿರ್ವಹಿಸಲು ಎಲ್ಲಾ ಕ್ರಮಕೈಗೊಳ್ಳಲಾಗಿರುತ್ತದೆ. |

**ಸಂಖ್ಯೆ: ನಅಇ 21 ಎಂಎಂಸಿ 2026 (ಇ)**

**(ಬಿ.ಎಸ್.ಸುರೇಶ್)**
**ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು**